ಕೃಷಿ ವಿವಿ: ಕವಾಯತು ಶಿಬಿರಕ್ಕೆ ಚಾಲನೆ

ಬೆಂಗಳೂರು: ದೇಶದ 30 ಸಾವಿರ ವಿವಿಧ ವಿಶ್ವವಿದ್ಯಾಲಯ ಹಾಗೂ ಸಂಸ್ಥೆಗಳಲ್ಲಿ 4 ಲಕ್ಷ ಎನ್ ಎಸ್‌ಎಸ್‌ಸ್ವಯಂಸೇವಕರುಕಾರ್ಯನಿರ್ವಸಿದ್ದಾರೆ ಎಂದು ಕೇಂದ್ರ ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆ ಅಧೀನ ಕಾರ್ಯದರ್ಶಿ ರವಿಕುಮಾರ್ ಸಿನ್ಹಾ ತಿಳಿಸಿದರು.

ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯ(ಜಿಕೆವಿಕೆ) ದಲ್ಲಿ ದಕ್ಷಿಣ ವಲಯದ ಗಣರಾಜ್ಯೋತ್ಸವ ಪೂರ್ವ ಕವಾಯತು ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಈ ಶಿಬಿರವು ಸ್ವಯಂ ಸೇವಕರುಗಳಿಗೆ ತಮ್ಮ ವಿದ್ಯಾ ಸಂಸ್ಥೆಯಾಗಿದ್ದು, ರಾಜ್ಯವನ್ನು ರಾಷ್ಟ್ರಮಟ್ಟದಲ್ಲಿ ಪ್ರತಿನಿಧಿಸುವ ಒಳ್ಳೆಯ ಅವಕಾಶ ಎಂದರು.

ಎನ್‌ಎಸ್‌ಎಸ್ ಅಧಿಕಾರಿ ಪ್ರತಾಪ್ ಲಿಂಗಯ್ಯ ಮಾತನಾಡಿ, ಎನ್‌ಎಸ್‌ಎಸ್ ಸ್ವಯಂ ಸೇವಕರು ದೊಡ್ಡ ಕನಸುಗಳನ್ನು ಕಾಣಬೇಕು. ಅದನ್ನು ಯಶಸ್ವಿಗೊಳಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಲು ಶ್ರಮ ಪಡಬೇಕು. ನಿಸ್ವಾರ್ಥ ಸೇವೆ, ಸಂಪೂರ್ಣ ವ್ಯಕ್ತಿತ್ವ ವಿಕಸನ, ಒಳ್ಳೆಯ ಜೀವನ ಶೈಲಿ ಹಾಗೂ ಸಂವಹನ ಕೌಶಲ್ಯಗಳನ್ನು ರೂಡಿಸಿಕೊಳ್ಳಬೇಕು ಎಂದರು.

ಕೃವಿವಿ ಬೆಂಗಳೂರಿನ ಶಿಕ್ಷಣ ನಿರ್ದೇಶಕ ಡಾ.ಕೆ.ಸಿ.ನಾರಾಯಣಸ್ವಾಮಿ, ಡಾ.ಎಸ್ .ವಿ.ಸುರೇಶ ಇದ್ದರು.

ಎನ್‌ಎಸ್‌ಎಸ್ ಸ್ವಯಂಸೇವಕರು ಶಿಸ್ತು, ಬದ್ಧತೆ, ಭಾವೈಕ್ಯತೆ ಮತ್ತು ಪರಿಶ್ರಮದಿಂದ ದೇಶದ ಅಭಿವೃದ್ಧಿಗೆ ಕೈಜೋಡಿಸಬೇಕು. ಪ್ರಕೃತಿಯಲ್ಲಿ ಸಸ್ಯಗಳ ಜೀವವೈದ್ಯತೆಯ ಸಂರಕ್ಷಣೆಯಲ್ಲಿ ಪ್ರಮುಖ ಪಾತ್ರ ವಹಿಸಬೇಕು.

ಡಾ. ಎಸ್.ರಾಜೇಂದ್ರಪ್ರಸಾದ್, ಕೃಷಿ ವಿವಿ ಕುಲಪತಿ

28-10-2021
Hd Pg 12

28-10-2021
Hd Pg 08

ಸರ್ಕಾರಿ ಯೋಜನೆ ರೈತರಿಗೆ ಸಿಗಲಿ

ತಿಪಟೂರು: ಕೃಷಿ ಸಮುದಾಯಕ್ಕೆ ನಿಕಟ ಸಂಪರ್ಕದಲ್ಲಿರುವ ಕೃಷಿ ಪರಿಕರ ಮಾರಾಟಗಾರರು ವೈಜ್ಞಾನಿಕ ಕೃಷಿ ತಂತ್ರಜ್ಞಾನ, ನೂತನ ತಾಂತ್ರಿಕ ಮಾಹಿತಿ, ಕೃಷಿ ಸಂಬಂಧಿತ ಮಾಹಿತಿಗಳನ್ನು ಸಮರ್ಪಕವಾಗಿ ರೈತರಿಗೆ ತಲುಪಿಸುವಂತಹ ಕಾರ್ಯವಾಗಬೇಕಿದೆ ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಸಂಶೋಧನಾ ನಿರ್ದೇಶಕರು ಡಾ. ವೈ. ಜಿ. ಷಡಕ್ಷರಿ ತಿಳಿಸಿದರು.

ತಾಲೂಕಿನ ಕೊನೆಹಳ್ಳಿಯ ಕೃಷಿ ವಿಜ್ಞಾನ ಕೇಂದ್ರದಲ್ಲಿ ಮಂಗಳವಾರ ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ, ತಿಪಟೂರಿನಲ್ಲಿ ಕೃಷಿ ವಿಸ್ತರಣಾ, ನಿರ್ವಹಣೆಯ ರಾಷ್ಟ್ರೀಯ ಸಂಸ್ಥೆ (ಒಂಓಂಉಇ), ಹೈದರಾಬಾದ್, ಸಮೇತಿ, ಬೆಂಗಳೂರು, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು, ಕೃಷಿ ಇಲಾಖೆ ಇವರ ಸಹಯೋಗದಲ್ಲಿ ಮೂರನೆಯ ತಂಡದ ಕೃಷಿ ವಿಸ್ತರಣಾ ಸೇವೆಯಲ್ಲಿ ಡಿಪ್ಲೋಮಾ ಪದವಿ ಪ್ರಮಾಣ ಪತ್ರಗಳ ವಿತರಣಾ ಸಮಾರಂಭ ಹಾಗೂ ಗುರುವಂದನಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ದೇಸಿ ಡಿಪ್ಲೋಮಾ ಕೋರ್ಸ್‌ನಿಂದ ಕೃಷಿ ಪರಿಕರ ಮಾರಾಟಗಾರರಿಗೆ ಮತ್ತು ಕೃಷಿ ವಿಜ್ಞಾನಕೇಂದ್ರದ ನಡುವೆ ಉತ್ತಮ ಸಂಪರ್ಕದ ಸೇತುವೆ ನಿರ್ಮಾಣವಾಗಿದೆ. ತರಬೇತಿಯಲ್ಲಿ ಪಡೆದ ಮಾಹಿತಿಯಿಂದ ರೈತರ ಸಮಸ್ಯೆಗೆ ಪರಿಹಾರ ನೀಡಲು ಮತ್ತು ರೈತರ ಸೇವೆಯಲ್ಲಿ ತೊಡಗಿಸಿಕೊಳ್ಳಲು ಸಹಾಯವಾಗಲಿದೆ. ರೈತರು ಬೆಳೆಯನ್ನು ಬೆಳೆಯಲು ಪರಿಕರಗಳು ಹೆಚ್ಚಾಗಿ ಅಗತ್ಯವಿದೆ. ಅಭಿವೃದ್ಧಿ ಹೊಮದಿದಂತೆ ಕೃಷಿಯಲ್ಲಿ ಮಾನವ ಸಂಪನ್ಮೂಲಗಳ ಬಳಕೆಯನ್ನು ತಗ್ಗಿಸುವ ಹೆಚ್ಚಿನ ಕಾರ್ಯವನ್ನು ನಿರ್ವಹಣೆ ಮಾಡುವಂತಹ ಪರಿಕರಗಳ ಅಗತ್ಯತೆಗಳು ಹೆಚ್ಚಾಗಿವೆ. ರೈತರಿಗೆ ಪರಿಕರಗಳ ಬಳಕೆಯ ಬಗ್ಗೆ ಸಂಪೂರ್ಣ ಮಾಹಿತಿ ನೀಡುವ ಜೊತೆಗೆ ಕೃಷಿ ಸ್ನೇಹಿಯಾಗುವಂತೆಯೂ ಇರಬೇಕಿದೆ ಎಂದರು. ಜಂಟಿ ಕೃಷಿ ನಿರ್ದೇಶಕರಾದ ಎಂ. ಎನ್. ರಾಜಸುಲೋಚನ ಮಾತನಾಡಿ, ಕೃಷಿ ವಿಸ್ತರಣೆಯಲ್ಲಿ ಡೀಲರ್ಸ್‌ಗಳ ಪಾತ್ರ ಬಹು ಮುಖ್ಯವಾದದ್ದು ಮತ್ತು ಕೃಷಿ ಪರಿಕರಗಳ ಮಾರಾಟಗಾರರು ಪರಿಕರಗಳನ್ನು ಮಾರಾಟಮಾಡುವಾಗ ಸರ್ಕಾರದ ನಿಯಮಗಳನ್ನು ಅನುಸರಿಸುವುದು ಅತ್ಯವಶ್ಯಕವೆಂದು ತಿಳಿಸಿದರು. ಕೃಷಿ ವಿಶ್ವವಿದ್ಯಾನಿಲಯದ ವಿಸ್ತರಣಾ ನಿರ್ದೇಶ ಡಾ. ಎನ್. ದೇವಕುಮಾರ್ ಮಾತನಾಡಿ, ಕೋರ್ಸ್‌ನಿಂದ ಪಡೆದ ಹೆಚ್ಚಿನ ಜ್ಞಾನ ಮತ್ತು ಅನುಭವದಿಂದ ಕೃಷಿ ಪರಿಕರ ಮಾರಾಟಗಾರರಿಗೆ ಹೆಚ್ಚಿನ ಜವಾಬ್ದಾರಿ ನೀಡಲಾಗಿದೆ. ವೃತ್ತಿಯಲ್ಲಿ ಬದಲಾವಣೆ ಕಾಣಬಹುದಾಗಿದೆ. ಕೃಷಿ ಪರಿಕರ ಮಾರಾಟಗಾರರು ವ್ಯಾಪಾರದ ಜೊತೆಗೆ ಸಮಾಜ ಮುಖಿಗಳಾಗಿ ಕಾರ್ಯ ನಿರ್ವಹಿಸಬೇಕು. ಪ್ರತಿಯೊಬ್ಬರ ಮಳಿಗೆಯು ರೈತರ ಮಾಹಿತಿ ಕೇಂದ್ರವಾಗಬೇಕು. ರೈತರು ವಿಶೇಷವಾಗಿ ಗುರುತಿಸುವಂತವರಾಗಬೇಕು ಮತ್ತು ರೈತರ ಏಳಿಗೆಗೆ ಸಹಕರಿಸಬೇಕು. ಕೃಷಿ ಇಲಾಖೆಯ ಜೊತೆಯಲ್ಲಿ ಕಾರ್ಯನಿರ್ವಹಿಸಬೇಕು ಎಂದು ತಿಳಿಸಿದರು.

ಡಿಎಇಎಸ್‌ಐ ಅನುವುಗಾರ ಶ್ರೀಧರಮೂರ್ತಿ ಮೂರನೇ ತಂಡದ ಡಿಎಇಎಸ್‌ಐ ಕಾರ್ಯಕ್ರಮದ ವರದಿಯನ್ನು ನೀಡಿದರು. ಈ ಸಂದರ್ಭದಲ್ಲಿ 38 ದೇಸಿ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರವನ್ನು ವಿತರಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಡಾ. ಓ.ಆರ್. ನಟರಾಜು, ರೂಪ. ಬಿ., ಡಾ. ನಾಗಪ್ಪ ದೇಸಾಯಿ, ಡಾ. ಅನಿತಾ, ಡಾ. ಪದ್ಮನಾಭ, ದರ್ಶನ್, ಅರ್ಜುಮನ್ ಭಾನು, ಶ್ರೀಧರಮೂರ್ತಿ ಇದ್ದರು.

ಹಡಿಲು ನೆಲದಲ್ಲೂ ಈ ಬಾರಿ ಸಮೃದ್ಧ ಬೆಳೆ | ದಲ್ಲಾಳಿ ಕಾಟದಿಂದ ಕ್ವಿಂಟಲ್‌ಗೆ 1400 ರೂ.ಗೆ ಖರೀದಿ!

ಕರಾವಳಿಯಲ್ಲಿ ಭತ್ತಕ್ಕೆ ಯೋಗ್ಯ ಬೆಲೆಯೇ ಇಲ್ಲ

■ **ವಿಜಯ್ ಕೋಟ್ಯಾನ್** ಮಂಗಳೂರು
vijaya.poojary@timesgroup.com

ಕರಾವಳಿಯಲ್ಲಿ ಈ ಬಾರಿ ಹಡಿಲು ನೆಲ ಭತ್ತ ಬೆಳೆಯುವ ದೊಡ್ಡ ಅಭಿಯಾನ ನಡೆದಿತ್ತು. ಹೀಗಾಗಿ ಉತ್ತಮ ಬೆಳೆಯೂ ಬಂದಿತ್ತು. ಆದರೆ, ಈ ಕಟಾವಿಗೆ ಬಂದಾಗ ಬೆಲೆಯೇ ಬಿದ್ದು ಹೋಗಿದೆ. ರಾಜ್ಯದ ಇತರ ಭಾಗಗಳಲ್ಲಿ ಭತ್ತವನ್ನು ಕ್ವಿಂಟಲ್‌ಗೆ 1850-1900 ರೂ.ಗೆ ಖರೀದಿಸಲಾಗುತ್ತಿದ್ದರೆ, ಕರಾವಳಿಯಲ್ಲಿ ಮಿಲ್‌ಗಳಲ್ಲಿ ದಲ್ಲಾಳಿಗಳ ಕಾಟದಿಂದ ಕೇವಲ 1400 ರೂ. ದೊರೆಯುತ್ತಿದೆ.

ಇನ್ನೊಂದು ಕಡೆ ಭಾರಿ ಮಳೆಯಿಂದಾಗಿ ಬೆಳೆ ಹಾನಿಯೂ ಸಂಭವಿಸಿದೆ. ಹೀಗಾಗಿ, ಭತ್ತ ಬೆಳೆದ ರೈತರು ಸೂಕ್ತ ಬೆಲೆ ಸಿಗದೆ ಕಂಗಾಲಾಗಿದ್ದಾರೆ. ಹೀಗಾಗಿ ಸರಕಾರ ತಕ್ಷಣ ಬೆಂಬಲ ಬೆಲೆ ಘೋಷಿಸಿ ಖರೀದಿಗೆ ವ್ಯವಸ್ಥೆ ಮಾಡಬೇಕು ಎಂಬ ಆಗ್ರಹ ಕೇಳಿಬಂದಿದೆ.

ರಾಜ್ಯದ ಒಟ್ಟು ಕೃಷಿ ಭೂಮಿಯಲ್ಲಿ ಶೇ.28.2ರಷ್ಟು ಭಾಗದಲ್ಲಿ ಭತ್ತ ಬೆಳೆಯಲಾಗುತ್ತಿದೆ. ಈ ವರ್ಷ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 11,747 ಹೆಕ್ಟೇರ್, ಉಡುಪಿ ಜಿಲ್ಲೆಯಲ್ಲಿ 35,726 ಹೆಕ್ಟೇರ್ ಭತ್ತ ಬೆಳೆಯಲಾಗಿದೆ. 2020-21ರಲ್ಲಿ ಭತ್ತಕ್ಕೆ

ಅಕಾಲಿಕ ಮಳೆಯಿಂದ ನೆಲಕ್ಕೆ ಒರಗಿದ ಭತ್ತದ ಸಸಿಗಳು.

1,850 ರೂ. ಬೆಂಬಲ ಘೋಷಿಸಿದ್ದರಿಂದ ಈ ಬಾರಿಯೂ ಅಷ್ಟೇ ಬೆಲೆ ಸಿಗಬಹುದು ಎಂಬ ನಿರೀಕ್ಷೆ ಇತ್ತು. ಗಂಗಾವತಿ ಸೇರಿದಂತೆ ರಾಜ್ಯದ ಇತರ ಭಾಗಗಳಲ್ಲಿ 1800 ರೂ.ಗಿಂತ ಹೆಚ್ಚಿನ ಬೆಲೆಯೇ ಇದೆ. ಆದರೆ, ಕರಾವಳಿ ಭಾಗದ ಮಿಲ್‌ಗಳು ಕೇವಲ ಬೆಲೆಯಲ್ಲಿಕ 1400 ರೂ.ಗೆ ಇಳಿಸಿಕೊಂಡಿವೆ.

ಉತ್ಪಾದನಾ ವೆಚ್ಚ ತುಟ್ಟಿ: ಎರಡು ದಶಕಗಳಿಂದ ಕರಾವಳಿ ಭಾಗದಲ್ಲಿ ಎಷ್ಟೋ ಗದ್ದೆಗಳು ಹಡಿಲು ಬಿದ್ದಿದ್ದವು. ಕಾರ್ಮಿಕರ ಕೊರತೆ, ಉತ್ಪಾದನಾ ವೆಚ್ಚ ತುಟ್ಟಿ, ಸರಕಾರದಿಂದ ಸರಿಯಾದ ಪ್ರೋತ್ಸಾಹ ಸಿಗದಿರುವುದು ಇದಕ್ಕೆ ಕಾರಣ. ಕಳೆದೆರಡು ವರ್ಷಗಳಿಂದ ಕೋವಿಡ್ ಕಾರಣದಿಂದ ಹಡಿಲು ಭೂಮಿಯಲ್ಲಿ ಕೃಷಿ ಪ್ರಮಾಣ ಹೆಚ್ಚಾಗಿದೆ. ರಾಜಕಾರಣಿಗಳು ಕೂಡಾ ಇದರಲ್ಲಿ ಮುಂಚೂಣಿಯಲ್ಲಿದ್ದರು. ಆದರೆ, ಭತ್ತಕ್ಕೆ ಬೆಲೆ ಇಲ್ಲದಿರುವ ಬಗ್ಗೆ ಅವರ್‍ಯಾರೂ ಮಾತನಾಡುತ್ತಿಲ್ಲ.

ಸೈಕ್ಲೋನ್‌ನಿಂದ ಮತ್ತಷ್ಟು ಭಾರ: ಸಾಮಾನ್ಯವಾಗಿ ಕರಾವಳಿ ಭಾಗದಲ್ಲಿ ಜೂನ್, ಜುಲೈ ತಿಂಗಳ ಮೊದಲ ವಾರದಲ್ಲಿ ನಾಟಿಯಾದ ಭತ್ತ ಕೃಷಿ ಅಕ್ಟೋಬರ್, ನವೆಂಬರ್ ವೇಳೆ ಕಟಾವಿಗೆ ಬರುತ್ತದೆ. ಜುಲೈ ಮಧ್ಯ ಭಾಗದಲ್ಲಿ ನಾಟಿಯಾದ ಭತ್ತ ಟಿಸಿಲೊಡೆದು ತೆನೆ ಬಾಗಲು ಆರಂಭವಾಗುತ್ತದೆ. ಈ ಸಮಯದಲ್ಲಿ ಹನಿ ಮಳೆ ಬಂದರೂ ಭತ್ತಕ್ಕೆ ಆಪತ್ತು. ಒಂದು ತಿಂಗಳಿಂದೀಚೆಗೆ ಕರಾವಳಿ ಭಾಗದಲ್ಲಿ ಸೈಕ್ಲೋನ್‌ನಿಂದ ಭಾರಿ ಮಳೆಯಾಗಿದ್ದು, ಇದರಿಂದ ಕಟಾವಿಗೆ ಸಿದ್ಧವಾಗಿರುವ ಸಾವಿರಾರು ಎಕರೆ ಭತ್ತ ನೆಲ ಕಚ್ಚಿದೆ. ಟಿಸಿಲೊಡೆದ ತೆನೆಗೆ ನೀರು ಬಿದ್ದು ಹಾನಿಯಾಗಿದೆ. ಕೆಲವೆಡೆ ಕಟಾವು ಆಗಿದ್ದರೂ ವಿಲೇವಾರಿ ಮಾಡಲಾಗದೆ ಗದ್ದೆ, ಅಂಗಳಗಳಲ್ಲಿ ರಾಶಿ ಬಿದ್ದಿವೆ.

ಅಕ್ಕಿಗೆ 42 ರೂ., ಭತ್ತಕ್ಕೆ 14!

ಕರಾವಳಿ ಭಾಗದಲ್ಲಿ ಮಿಲ್‌ಗಳಿಂದ ಮಾರಾಟವಾಗುವ ಅಕ್ಕಿಗೆ 35ರಿಂದ 42 ರೂ. ವರೆಗೂ ದರವಿದೆ. ಆದರೆ, ಭತ್ತವನ್ನು ಖರೀದಿಸುವುದು ಮಾತ್ರ ಕೆಜಿಗೆ 14 ರೂ.ಗೆ! ಇಷ್ಟೆಲ್ಲ ವ್ಯತ್ಯಾಸ ಯಾಕೆ ಎಂದು ಕೇಳಿದರೆ ಇಲ್ಲಿನ ಭತ್ತದ ಗುಣಮಟ್ಟ ಕಡಿಮೆ ಎಂಬ ಸಬೂಬು ಕೇಳಿಬರುತ್ತಿದೆ. ಆದರೆ, ಇದೇ ಭತ್ತದ ಅಕ್ಕಿಗೆ ಬೆಲೆಯೇನೂ ಕಡಿಮೆ ಇಲ್ಲ.

ಭತ್ತಕ್ಕೆ ಬೆಂಬಲ ಬೆಲೆ ಘೋಷಣೆಗೆ ಸಂಬಂಧಪಟ್ಟಂತೆ ರಾಜ್ಯ ಸರಕಾರದ ಗಮನಕ್ಕೆ ತರಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಬಾರಿ ಹಡಿಲು ಕೃಷಿ ಭೂಮಿಯಲ್ಲೂ ಭತ್ತ ಬೆಳೆಗೆ ಪ್ರೋತ್ಸಾಹ ನೀಡಿದ ಕಾರಣ ಉತ್ತಮ ಇಳುವರಿಯೂ ಬಂದಿದೆ. ಬೆಂಬಲ ಬೆಲೆ ಎಪಿಎಂಸಿ ಮತ್ತು ಆಹಾರ ಇಲಾಖೆಗೆ ಸಂಬಂಧಪಟ್ಟ ವಿಷಯ. ಕೃಷಿ ಇಲಾಖೆಗೆ ಇದು ಅನ್ವಯವಾಗಲ್ಲ.

-ಡಾ. ಎಂ. ಸೀತಾ ಜಂಟಿ ನಿರ್ದೇಶಕರು, ಕೃಷಿ ಇಲಾಖೆ, ದ.ಕ.

ಮಳೆಯಿಂದಾಗಿ ಭತ್ತದ ಬೆಳೆಗೆ ಭಾರಿ ಹಾನಿಯಾಗಿದೆ. ಜತೆಗೆ ಭತ್ತಕ್ಕೆ ಬೆಲೆಯೂ ಇಲ್ಲ. ಹೀಗಾಗಿ ಮುಂದಿನ ಬಾರಿ ಜನರು ಆಸಕ್ತಿ ಕಳೆದುಕೊಳ್ಳುವ ಸಾಧ್ಯತೆ ಇದೆ. ಕರಾವಳಿ ಭಾಗದಲ್ಲಿ ಭತ್ತ ಕೃಷಿ ಉಳಿಯಬೇಕಾದರೆ ಕೂಡಲೇ ರಾಜ್ಯ ಸರಕಾರ ಬೆಂಬಲ ಬೆಲೆ ಘೋಷಿಸಬೇಕು.

-ಪ್ರೇಮನಾಥ್ ಶೆಟ್ಟಿ ಬಾಳ್ತಿಲ ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ

28-10-2021 Vk Pg 06

ರೇಷ್ಮೆ ಬೆಳೆಗಾರರಿಗೆ ಗುರುತಿನ ಚೀಟಿ ವಿತರಣೆ

ಬೆಂಗಳೂರು: ರೇಷ್ಮೆ ಇಲಾಖೆಯಿಂದ 1.38 ಲಕ್ಷ ರೇಷ್ಮೆ ಬೆಳೆಗಾರರಿಗೆ ಗುರುತಿನ ಚೀಟಿ ವಿತರಿಸಲು ಸರ್ಕಾರ ನಿರ್ಧರಿಸಿದೆ.

ರೇಷ್ಮೆ ಸಚಿವ ಡಾ. ನಾರಾಯಣಗೌಡ ಬುಧವಾರ ವಿಧಾನಸೌಧದ ಸಮಿತಿ ಕೊಠಡಿಯಲ್ಲಿ ರೇಷ್ಮೆ ಇಲಾಖೆಗೆ ಸಂಬಂಧಿಸಿದಂತೆ ಅಧಿಕಾರಿಗಳ ಸಭೆ ನಡೆಸಿದರು. ರೇಷ್ಮೆ ಬೆಳೆಗಾರರಿಗೆ ಅನುಕೂಲ ಆಗುವ ನಿಟ್ಟಿನಲ್ಲಿ ಹಲವು ಸುಧಾರಣಾ ಕ್ರಮಗಳನ್ನು ತೆಗೆದುಕೊಳ್ಳುವ ಕುರಿತು ಚರ್ಚಿಸಲಾಯಿತು.

» **ಸಾಗಣೆ ವೆಚ್ಚ ಮತ್ತೆ ಹತ್ತು ಜಿಲ್ಲೆಗಳಿಗೆ ವಿಸ್ತರಣೆ**

ರೇಷ್ಮೆ ಬೆಳೆಗಾರರಿಗೆ ಆಗುತ್ತಿರುವ ಸಮಸ್ಯೆ ತಪ್ಪಿಸುವ ನಿಟ್ಟಿನಲ್ಲಿ 1.38 ಲಕ್ಷ ರೇಷ್ಮೆ ಬೆಳೆಗಾರರಿಗೆ ಗುರುತಿನಚೀಟಿ ವಿತರಿಸಲು ನಿರ್ಧರಿಸಲಾಗಿದೆ. ಬಳ್ಳಾರಿಯಲ್ಲಿ ಕಾರ್ಯಕ್ರಮಕ್ಕೆ ಚಾಲನೆ ದೊರೆಯಲಿದೆ. ಹಂತಹಂತವಾಗಿ ಎಲ್ಲಾ ಜಿಲ್ಲೆಗಳಲ್ಲಿ ರೇಷ್ಮೆ ಬೆಳೆಗಾರರಿಗೆ ಗುರುತಿನ ಚೀಟಿ ವಿತರಿಸಲಾಗುತ್ತದೆ ಎಂದು ನಾರಾಯಣಗೌಡ ತಿಳಿಸಿದರು.

ರೇಷ್ಮೆ ಬೆಳೆಗಾರರಿಗೆ ಆಗುತ್ತಿದ್ದ ಹೊರೆಯನ್ನು ತಪ್ಪಿಸಲು ಉತ್ತರ ಕರ್ನಾಟಕದ 13 ಜಿಲ್ಲೆಯ ರೇಷ್ಮೆ ಬೆಳೆಗಾರಿಗೆ ಪ್ರತಿ ಕೆಜಿಗೆ 10 ರೂ. ಸಾಗಾಣಿಕೆ ವೆಚ್ಚ ನೀಡಲಾಗುತ್ತಿದೆ. ಇದೀಗ ಮತ್ತೆ ಹೊಸದಾಗಿ 10 ಜಿಲ್ಲೆಗಳ ರೇಷ್ಮೆ ಬೆಳೆಗಾರರಿಗೆ ಸಾಗಣೆ ವೆಚ್ಚ ನೀಡಲು ನಿರ್ಧರಿಸಲಾಗಿದೆ. ಇದರಿಂದ ಬಳ್ಳಾರಿ, ಬೀದರ್, ಕಲಬುರಗಿ, ಕೊಪ್ಪಳ, ರಾಯಚೂರು, ಯಾದಗಿರಿ, ಬಾಗಲಕೋಟೆ, ಬೆಳಗಾವಿ, ವಿಜಯಪುರ, ಧಾರವಾಡ, ಗದಗ, ಹಾವೇರಿ, ಉ.ಕನ್ನಡದ ಬೆಳೆಗಾರರಿಗೆ ಅನುಕೂಲ ಆಗಲಿದೆ ಎಂದರು.

ರೇಷ್ಮೆ ಬೆಳೆಗಾರರಿಗೆ ಅನುಕೂಲವಾಗಲು ಕೆಎಸ್ಎಂಬಿಯಿಂದಲೇ ರೇಷ್ಮೆ ಖರೀದಿಸುವ ಬಗ್ಗೆ ಚರ್ಚಿಸಲಾಗಿದೆ. ಇಲಾಖೆಯಿಂದಲೇ ರೇಷ್ಮೆ ಖರೀದಿಸುವುದರಿಂದ ರೈತರಿಗೂ ಅನುಕೂಲ ಆಗಲಿದೆ. ಜತೆಗೆ ಇಲಾಖೆಗೂ ಲಾಭ ಬರಲಿದೆ. ಹಾಗಾಗಿ ಅಗತ್ಯ ಕ್ರಮಗಳ ಕುರಿತು ವರದಿ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ವರದಿ ಕೊಡದಿದ್ದರೆ 3 ದಿನದಲ್ಲೇ ಗೇಟ್ ಪಾಸ್

ಬೆಂಗಳೂರಿನ ಓಕಳಿಪುರಂನಲ್ಲಿ ಪಿಪಿಪಿ ಮಾದರಿಯಲ್ಲಿ ರೇಷ್ಮೆ ಭವನ ನಿರ್ಮಾಣ ವಿಚಾರದಲ್ಲಿ ನಿರ್ಲಕ್ಷ್ಯ ತೋರುತ್ತಿರುವ ಅಧಿಕಾರಿಗಳಿಗೆ ಸಚಿವ ನಾರಾಯಣಗೌಡ ತರಾಟೆಗೆ ತೆಗೆದುಕೊಂಡರು. ಎರಡು ವರ್ಷದ ಹಿಂದೆಯೇ ಮಂಜೂರಾತಿ ಸಿಕ್ಕಿದ್ದರೂ ಟೆಂಡರ್ ಕರೆಯಲು ಪ್ಲ್ಯಾನಿಂಗ್ ಸಿದ್ಧಪಡಿಸದೆ ಸಬೂಬು ಹೇಳುತ್ತಿರುವ ಇಂಜಿನಿಯರ್ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು. ಮೂರು ದಿನದೊಳಗೆ ಪ್ಲ್ಯಾನಿಂಗ್ ರಿಪೋರ್ಟ್ ಸಲ್ಲಿಸಬೇಕು. ಇಲ್ಲದಿದ್ದರೆ ಇಲಾಖೆಯಿಂದ ಖಾಲಿ ಮಾಡಬೇಕು ಎಂದು ವಾರ್ನಿಂಗ್ ನೀಡಿದರು.

28-10-2021 Vv Pg 05

Krishi Udan 2.0 scheme launched to boost transport of agri-products

NEW DELHI, PTI

The Ministry of Civil Aviation on Wednesday launched Krishi Udan 2.0 scheme under which cargo-related infrastructure will be built in airports of north-east, hilly and tribal regions to assist farmers in transporting agriculture products.

The Krishi Udan scheme, launched by the Centre in September 2020, waived airport charges such as parking charges and terminal navigational landing charges on select Indian airports for air cargo operators if the agricultural cargo is over 50% of the total chargeable weight carried.

The Centre, under Krishi Udan 2.0, has stated that full waiver of airport charges would be granted at select airports even if the agricultural cargo is less than 50% of the total chargeable weight carried.

Under Krishi Udan 2.0, the Centre said it will facilitate the development of hub and spoke model in India and create cargo terminals at the airports in a phase-wise manner.

For example, cargo terminals will be established at the airports in Agartala, Srinagar, Dibrugarh, Dimapur, Hubbali, Imphal, Jorhat, Lilabari, Lucknow, Silchar, Tezpur, Tirupati and Tuticorin within 2021-22.

In 2022-23, the cargo terminals will be established at airports in Ahmedabad, Bhavnagar, Jharsuguda, Kozhikode, Mysore, Puducherry, Rajkot and Vijayawada to assist transportation of agriculture produce, the Centre mentioned.

Moreover, under Krishi Udan 2.0, the government would also encourage states to reduce sales tax to 1% on aviation turbine fuel that is used in freighter aircraft and passenger aircraft that are being used to just transport cargo.

Various government departments and regulatory bodies, under the newly launched scheme, will collaborate with the civil aviation ministry to provide freight forwarders, airlines and other stakeholders with incentives and concessions to carry more agriculture products.

Civil Aviation Minister Jyotiraditya Scindia, while launching Krishi Udan 2.0 here, said that the scheme aims to channelise the immense potential of Indian agriculture with the logistical help of civil aviation towards the goal of doubling farmers' income and making them self-reliant.

28-10-2021 Dec Hrd Pg 02

For more information visit University Library Website
Web - uasbagrilibindia.org
E-mail- librarian@uasbangalore.edu.in

Key schemes in red, Rs 21k cr funds remain unspent

Energy dept has not spent money towards pension

BHARATH JOSHI
BENGALURU, DHNS

At least four major departments, including Health, are in the red for underspending on seven key schemes this financial year, according to data presented in the Karnataka Development Programme (KDP) meeting on Wednesday.

By the end of September, the halfway mark in the fiscal, the Health department has not incurred any expenditure on strengthening primary healthcare facilities using the 15th Finance Commission grants, for which there is a budget allocation of Rs 552 crore.

Similarly, the agriculture department has recorded zero expenditure under the PM-KISAN scheme - financial incentives to farmers - that has Rs 2,120 crore budgeted. The energy department has not spent money towards pension payment contribution (Rs 1,000 crore allocation) and the urban development department has nil expenditure on the Bengaluru suburban rail project for which Rs 590 crore is earmarked.

The Housing department has spent just 5-20% of money on the PMAY (rural), Ashraya-Basava and BR Ambedkar Nivas schemes. Their total allocation is Rs 1,600 crore.

Agriculture department has recorded nil expenditure on PM-KISAN scheme. DH FILE PHOTO

Totally, the government has an unspent allocation of Rs 21,331.65 crore by the end of September, according to data.

The highest non-spenders include the departments of primary & secondary education (Rs 3,259.49 crore), urban development (Rs 2,658.52 crore) and home (Rs 2,398.85 crore).

A prominent lag is in the development of rural roads (PM Gram Sadak Yojana) on which the government has spent just 21.48% against an allocation of Rs 1,771.36 crore. "Our expenditures will start picking up. Till September, we were preparing estimates and doing the tender process. Also, we had a prolonged monsoon, so all our asphalting work had to be put on hold," Rural Development & Panchayat Raj principal secretary LK Atheeq said, when contacted.

The good news is that Karnataka's expenditure figures look better this financial year compared with the previous pandemic-hit fiscal. Between April and September, the government had spent Rs 77,883.78 crore, which is 35.94% of the total budgetary allocation for the fiscal. This is higher than Rs 62,065.15 crore or 28.23% in the corresponding period last year.

Eight big-ticket programmes, each worth Rs 500 crore or more, have seen an expenditure exceeding 95%. This includes interest subsidy for cooperative crop loans, disaster relief, subsidy for rice/wheat, Ayushman Bharat, highway development and MGNREGA.

28-10-2021 Dec Hrd Pg 02

ಕರ್ನಾಟಕದಲ್ಲಿ ಹೊಸ ಕ್ಷೀರ ಕ್ರಾಂತಿ

■ ದಯಾಶಂಕರ್ ಮೈಲಿ

ಬೆಂಗಳೂರು: ಕೊರೊನಾ ಎಂಬ ಹೆಮ್ಮಾರಿ ಎರಗಿದ್ದರಿಂದ 18 ತಿಂಗಳಲ್ಲಿ ಎರಡೆರಡು ಬಾರಿ ಲಾಕ್‌ಡೌನ್ ಹೇರಲಾಯಿತು. ಇದರ ಪರಿಣಾಮ ನಗರ ಪ್ರದೇಶಗಳಿಗೆ ಉದ್ಯೋಗ, ಉದ್ದಿಮೆ ಮಾಡಲು ಬಂದಿದ್ದ ಜನರು ಬೇರೆ ದಾರಿ ಕಾಣದೆ ಜನರು ತಾವು ಹುಟ್ಟಿ ಬೆಳೆದ ತಮ್ಮ ತಮ್ಮ ಹಳ್ಳಿಗಳಿಗೆ ಹಿಂತಿರುಗಿ, ಅಲ್ಲಿ ಬದುಕು ಕಟ್ಟಿಕೊಳ್ಳಲು ಕೃಷಿಯ ಜೊತೆಗೆ ಹೈನುಗಾರಿಕೆ ಮಾಡಲಾರಂಭಿಸಿದರು.

ಇದರಿಂದ ರಾಜ್ಯಾದ್ಯಂತ ಇರುವ ಬಹುತೇಕ 14 ಹಾಲು ಒಕ್ಕೂಟಗಳ ವ್ಯಾಪ್ತಿಯಲ್ಲಿ ಹಾಲಿನ ಉತ್ಪಾದನೆ ಹೆಚ್ಚಳವಾಗಿದೆ. ಆದರೆ ಹೆಚ್ಚುವರಿ ಹಾಲಿಗೆ ಬೇಡಿಕೆ ಇಲ್ಲ. ಈ ಹಿನ್ನೆಲೆಯಲ್ಲಿ ಹಾಲಿನ ಪುಡಿ ಮಾಡಲಾಗುತ್ತಿದೆ. ವಾಸ್ತವವಾಗಿ ಹಾಲಿನ ಪುಡಿ ಮಾಡುವುದು ನಷ್ಟವೇ. 1 ಕೆಜಿ ಹಾಲಿನ ಪುಡಿಗೆ 325 ರು. ಬೆಲೆ ಇತ್ತು ಆದರೆ 195 ರ. ಇದೆ. ಇಂತಹ ಸಂದರ್ಭದಲ್ಲೂ ಉತ್ಪಾದನೆ ಆದ ಹಾಲನ್ನು 'ನಂದಿನಿ' ಬ್ರಾಂಡ್ ಹೆಸರಿನಲ್ಲಿ ಗ್ರಾಹಕರಿಗೆ ಮಾರಾಟ ಮಾಡಬೇಕು ಮತ್ತು ಹಾಲಿನ ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ಕಲ್ಪಿಸಿಕೊಳ್ಳಬೇಕಾಗಿದೆ. ಹಿಂದೆ ತಿರುಪತಿಯಲ್ಲಿ ಲಡ್ಡು ಮಾಡಲು ಕೆಎಂಎಫ್ ನಿಂದ 1500 ರಿಂದ 2000 ಟನ್ ತುಪ್ಪ ಮಾಡಲಾಗುತ್ತಿತ್ತು. ಈಗ ಟೆಂಡರ್ ವ್ಯವಸ್ಥೆ ಬಂದ ಕಾರಣ ನಿಂತಿದೆ.

ಉದ್ಯಮಗಳು ಯಶಸ್ವಿಯಾಗಲೂ ಮಾರುಕಟ್ಟೆ ನೀತಿಯಂತೆ ಉತ್ಪಾದನೆಗಿಂತ ಬೇಡಿಕೆ ಹೆಚ್ಚಿರಬೇಕು. ಇದು ಉಲ್ಟಾ-ಪಲ್ಟಾವಾದರೇ ಉದ್ಯಮಕ್ಕೆ ಹಿನ್ನಡೆ ಆಗುತ್ತದೆ. ಈಗ ರಾಜ್ಯ ಹಾಲು ಮಹಾಮಂಡಲಕ್ಕೆ (ಕೆಎಂಎಫ್) ಅದೇ ಸಮಸ್ಯೆ ಆಗಿರೋದು. ಬೇಡಿಕೆಗಿಂತ ಹಾಲು ಉತ್ಪಾದನೆ ಹೆಚ್ಚಳವಾಗಿದೆ. ಆದರೂ ಹೆಚ್ಚು ಹಾಲನ್ನು ರೈತರಿಂದ ಖರೀದಿಸುವುದನ್ನು ನಿಲ್ಲಿಸುವಂತಿಲ್ಲ. ಹೆಚ್ಚಿನ ಹಾಲನ್ನು ಹೇಗಾದರೂ ಮಾಡಿ ಮಾರಾಟ ಮಾಡಲೇಬೇಕಾದ ಅನಿವಾರ್ಯತೆ ಮಾತ್ರವೇ ಅಲ್ಲ, ಸವಾಲು ಕೂಡ ಕೆಎಂಎಫ್ ಮುಂದಿದೆ. ಅದಕ್ಕಾಗಿ ಹರಸಾಹಸ ಮಾಡಲಾಗುತ್ತಿದೆ.

> “ಈಗ 82 ಲಕ್ಷಕ್ಕೂ ಹೆಚ್ಚು ಹಾಲು ಪ್ರತಿದಿನ ಸಂಗ್ರಹವಾಗುತ್ತಿದೆ. ಹಾಲಿನ ಜೊತೆಗೆ ಹಾಲಿನ ಉಪ ಉತ್ಪನ್ನಗಳನ್ನ ಹೆಚ್ಚು ಮಾರಾಟ ಮಾಡಲಿಕ್ಕೆ ಹೊಸ ಮಾರುಕಟ್ಟೆ ಪಾಲಿಸಿ ತರಲಾಗುತ್ತಿದೆ. ಮುಂದಿನ ದಿನಗಳಲ್ಲಿ 1.30 ಕೋಟಿ ಲೀಟರ್ ಹಾಲಿಗೆ ಮಾರುಕಟ್ಟೆ ಮಾಡುವ ಗುರಿ ಇದೆ. ಏನೇ ಆಗಲಿ ರೈತರು, ಗ್ರಾಹಕರು, ಸಿಬ್ಬಂದಿಯ ಹಿತ ಕಾಯಲು ಬದ್ದ
>
> ■ ಬಾಲಚಂದ್ರ ಜಾರಕಿಹೊಳಿ
> | ಅಧ್ಯಕ್ಷರು. ಕೆಎಂಎಫ್.

ಕೆಎಂಎಫ್ ತನ್ನ ಉತ್ಪನ್ನಗಳನ್ನು ಹೆಚ್ಚಿಸಲು ಕೈಗೊಂಡಿರುವ ಕ್ರಮ

- 180 ದಿನಗಳ ಕಾಲ ಫ್ರೀಡ್ಜ್ ಇಲ್ಲದೇ ಇಡಬಹು ದಾದ ಟೆಟ್ರಾ ಪ್ಯಾಕೇಟ್ ಹಾಲನ್ನು ಸೇನಾ ಪಡೆಗಳಿಗೆ ಹೆಚ್ಚು ಸರರಾಜು ಮಾಡಲು ಯತ್ನ.
- ಈಗಾಗಲೇ ಕಲ್ಕತ್ತ, ಹೈದರಾಬಾದ್, ಮುಂಬಯಿ, ಗೋವಾ ರಾಜ್ಯಗಳಲ್ಲಿ ಮತ್ತು ರಾಜ್ಯದಲ್ಲಿ ಇರುವ ನಂದಿನಿ ಮಾರಾಟ ಕೇಂದ್ರಗಳಲ್ಲಿ ಹೆಚ್ಚಿನ ಹಾಲನ್ನು ಮಾರಾಟ ಮಾಡಲು ಬೇಕಾದ ಮಾರುಕಟ್ಟೆ ತಂತ್ರಗಳನ್ನು ಚುರುಕುಗೊಳಿಸುವುದು.
- ಹಾಲು ಮತ್ತು ಹಾಲಿನ ಉಪ ಉತ್ಪನ್ನಗಳಿಗೆ ಕೆಲ ರಿಯಾಯ್ತಿಗಳನ್ನು ಘೋಷಣೆ.
- ಟೆಂಡರ್ ಮೂಲಕ ತಿರುಪತಿಗೆ ತುಪ್ಪ ಸರಬರಾಜು ಮಾಡುವ ಗುತ್ತಿಗೆಯನ್ನು ಪಡೆಯಲು ಅವಿರತ ಯತ್ನ.
- ಹೊರದೇಶಗಳಿಗೆ ಹಾಲಿನ ಪುಡಿಯನ್ನು ರಫ್ತು ಮಾಡಲು ಕ್ರಮ.
- ರಾಜ್ಯದ ಎಲ್ಲ ಜಿಲ್ಲಾ ಸಹಕಾರಿ ಹಾಲು ಒಕ್ಕೂಟಗಳಲ್ಲೂ ಹಾಲು ಖರೀದಿಗೆ ಏಕರೂಪ ದರ ನಿಗದಿಪಡಿಸುವುದು.
- ಸಮಗ್ರ ಮಾರುಕಟ್ಟೆ ಅಭಿವೃದ್ಧಿ, ಹಾಲಿನ ಉಪ ಉತ್ಪನ್ನಗಳಾದ ಪನ್ನೀರ್, ಕೋವಾ, ಮೈಸೂರು ಪಾಕ್, ಪೇಡಾ, ಚೀಸ್ ಉತ್ಪನ್ನಗಳನ್ನು ದುಪ್ಪಟ್ಟು ಉತ್ಪಾದನೆ ಮಾಡಿ ಲಾಭದಾಯಕ ಮಾರುಕಟ್ಟೆ ಒದಗಿಸುವುದು.

ಹಾಲು ಉತ್ಪಾದನೆ ಎಷ್ಟು ಹೆಚ್ಚಳ ?

ಕೊರೊನಾ ಬರುವುದಕ್ಕೆ ಮುಂಚೆ (18 ತಿಂಗಳ ಹಿಂದೆ) ಪ್ರತಿದಿನ ರಾಜ್ಯದಲ್ಲಿ 79 ರಿಂದ 80 ಲಕ್ಷ ಲೀಟರ್ ಹಾಲು ಉತ್ಪಾದನೆ ಆಗುತ್ತಿತ್ತು. ಈಗ 81 ರಿಂದ 84 ಲಕ್ಷ ಲೀಟರ್ ಉತ್ಪಾದನೆ ಆಗುತ್ತಿದೆ. ಅಂದರೆ 14 ಹಾಲು ಒಕ್ಕೂಟಗಳಲ್ಲಿ ಶೇ.4 ರಷ್ಟು ಹೆಚ್ಚು ಉತ್ಪಾದನೆ. ಉತ್ತರ ಕರ್ನಾಟಕಕ್ಕಿಂತ ದಕ್ಷಿಣ ಕರ್ನಾಟದ ಜಿಲ್ಲೆಗಳಲ್ಲಿ ಹೆಚ್ಚು ಹಾಲು ಉತ್ಪಾದನೆ ಆಗುತ್ತಿದೆ. ಈಗಾಗಲೇ ಹಾಸನ ಒಕ್ಕೂಟದಲ್ಲಿ 1 ಲಕ್ಷ ಲೀಟರ್ ಫ್ಲೇವರ್ ಮಿಲ್ಕ್ ತಯಾರಿಸಲು ಕ್ರಮ ಕೈಗೊಳ್ಳಲಾಗಿದೆ. ಬೆಂಗಳೂರು ಘಟಕದಿಂದ ಚೀಸ್, ಚಾಕಲೇಟ್ ಉತ್ಪಾದನೆ ಹೆಚ್ಚು ಮಾಡಲಾಗುತ್ತಿದೆ. ರೈತ ಮಹಿಳೆಯರ ಆರ್ಥಿಕ ಸುಧಾರಣೆಗೆ ನೆರವಾಗಿ ನಿಂತಿರುವ ಕೆಎಂಎಫ್ ದೇಶದ ಸಹಕಾರಿ ಹೈನೋದ್ಯಮದಲ್ಲಿ 2 ನೇ ಸ್ಥಾನ ಪಡೆದಿದ್ದರೇ, ದಕ್ಷಿಣ ಭಾರತದಲ್ಲಿ ಮೊದಲ ಸ್ಥಾನದಲ್ಲಿ ಇದೆ.

28-10-2021 Sk Pg 07